**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್.ಸಿ. ನಂಃ 10012 / 2022**

**ಚಾಸಾ ಃ 2**

**ಪ್ರಾಸಾ ಃ 2**

| | | |
|---|---|---|
| **ಹೆಸರು** | ಃ | ಅಶ್ವಥ ನಾರಾಯಣ |
| ತಂದೆ **ಹೆಸರು** | ಃ | ಆರ್ ರಾಮಸ್ವಾಮಯ್ಯ |
| **ವಯಸ್ಸು** | ಃ | 72 ವರ್ಷ |
| **ವೃತ್ತಿ** | ಃ | ವ್ಯವಸಾಯ |
| **ವಾಸ** | ಃ | ಯಲಹಂಕ |

**ಈ ದಿನ ದಿನಾಂಕಃ 06.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತಿಲ್ಲ, ಚಾಸ-1 ನನ್ನ ಮಗ ಚಾಸ-3 ಮತ್ತು 4 ನನ್ನ ಮಕ್ಕಳು, ಚಾಸ-5 ರಿಂದ 11 ರವರು ಗೊತ್ತಿಲ್ಲ. ರಾಜಾನುಕುಂಟೇ ಹೊನ್ನೇನಹಳ್ಳಿ ನಲ್ಲಿ ನಮ್ಮ ಬಾಬ್ತು ಶ್ರೀರಂಗ ಕಲ್ಯಾಣ ಮಂಟಪ್ಪ ಇದೆ. ನನ್ನ ಸ್ವಂತಕ್ಕೆ ಕಾರ್ ಸಂಖ್ಯೆ ಕೆಎ-50ಎಂಎ 0018 ವಾಹನವನ್ನು ಬಳಸುತ್ತಿದ್ದು, ಕಳೆದ 3 ವರ್ಷದ ಹಿಂದೆ ಅದನ್ನು ಸದರಿ ಕಲ್ಯಾಣ ಮಂಟಪದ ಕಾಂಪೌಂಡ್ ಒಳಗೆ ನಿಲಿಸಿದ್ದನು. ಮರು ದಿವಸ ಬೆಳಿಗ್ಗೆ ಎದ್ದು ನೋಡಿದ್ದಾಗ ಕಾರ್ ಸುಟ್ಟು ಹೋಗಿತ್ತು. ಕಾರಿಗೆ ಯಾರ ಬೆಂಕಿ ಹಚ್ಚಿದ್ದರು, ಹೇಗೆ ಸುಟ್ಟಿತ್ತು ಎಂದು ಗೊತ್ತಿಲ್ಲ. ಈ ವಿಚಾರವನ್ನು ನಾನು ಪೋಲಿಸರಿಗೆ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಬೇರೆ ಮಾಹಿತಿ ಗೊತ್ತಿಲ್ಲ ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**( ಈ ಹಂತದಲ್ಲಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದರಿಂದ ವಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

**2.** ದಿನಾಂಕ **04.11.2021** ರಂದು ಬೆಳಿಗ್ಗೆ **5-00** ಗಂಟೆ ಸಮಯಕ್ಕೆ ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿ ನನ್ನ ಮತ್ತು ಚಾಸ-1 ರವರಿಗೆ ತಾನು ಕೇಂದ್ರ ಕಾರಗೃಹದಿಂದ ಜಾಮೀನು ಪಡೆದು ಹಣವನ್ನು ಕೊಡುವಂತೆ ಪದೇ ಪದೇ ಬಲವಂತದಿಂದ ಕೇಳಿದ್ದು, ಹಣ ಕೊಡದೇ ಇದ್ದರೇ ನನ್ನ ಕಡೆಯ ಹುಡುಗರನ್ನು ಬಿಟ್ಟು ನಿಮ್ಮ ಮನೆ, ಕಲ್ಯಾಣ, ಕಾರ್ ಸುಟ್ಟು ಹಾಕುವುದಾಗಿ ಮೊಬೈಲ್ ಮೂಲಕ ಕರೆ ಮಾಡಿ ನಮಗೆ ಅವಾಚ್ಯ ಶಬ್ದದಿಂದ ಬೈದು ಜೀವ ಬೆದರಿಕೆ ಹಾಕಿದ್ದು, ಉಳಿದ 2 ರಿಂದ 7ನೇ ಆರೋಪಿತರ ಜೊತೆ ಒಳಸಂಚು ನಡೆಸಿ ನನ್ನ ಕಲ್ಯಾಣ ಮಂಟಪಕ್ಕೆ ಹೋಗಿ ನನ್ನ ಕಾರಿಗೆ ಪೆಟ್ರೋಲ್ ಹಾಕಿ ಬೆಂಕಿ ಇಟ್ಟು ಹಾಕಲು ಪಿತ್ತೂರು ಮಾಡಿದ್ದು, ಅದರಂತೆ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು, ನನ್ನ ಕಾರ್ ಸಂಖ್ಯೆ ಕೆಎ-50ಎಂಎ-0018 ಗೆ ಪೆಟ್ರೋಲ್ ಹಾಕಿ ಬೆಂಕಿ ಇಟ್ಟು ಸುಟ್ಟು ಹಾಕಿರುತ್ತಾರೆಂದರೆ ಸರಿಯಲ್ಲ.

**3.** ಈ ಹಿಂದೆ ಬೆಂಗಳೂರು ಬ್ಯಾಟರಾಯಪುರ ವಾಸಿ ಚೈತನ್ ಗೌಡ ಎಂಬುವವನು ನಮ್ಮ ಮನೆಗೆ ಟ್ರಾಕ್ಟರ್ ನಲ್ಲಿ ನೀರು ಹಾಕುತ್ತಿದ್ದು, ನಮಗೆ ಪರಿಚಯ ಇದ್ದ, ಕೆಲವು ಪ್ರಕರಣಗಳಲ್ಲಿ ಆತ ಬಾಗಿ ಆಗಿದ್ದ ವಿಷಯ ನನಗೆ ಗೊತ್ತಾಗಿ ಚಾಸ-1 ರವರಿಗೆ ಅವನ ಜೊತೆ ಸೇರ ಬೇಡ ಎಂದು ಹೇಳಿದ್ದು, ಚಾಸ-1 ಅವನಿಂದ ದೂರ ಇದ್ದನು. ಚೈತನ್ ಗೌಡ ನಾವು ಕಷ್ಟದಲ್ಲಿದ್ದೇವೆ, ಜೈಲಿನಲ್ಲಿದ್ದ ನನ್ನ ತಮ್ಮ ಮನೋಜ್ ಜಾಮೀನಿಗೆ ಹಣ ಬೇಕಾಗಿತ್ತು, ಹಣ ಸಹಾಯ ಮಾಡಿ ಎಂದು ನನ್ನಲ್ಲಿ ಕೇಳಿದ್ದು, ನನ್ನ ಹತ್ತಿರ ಹಣ ಇಲ್ಲ ಎಂದು ಹೇಳಿ ಕಳುಹಿಸಿದ್ದೇನು ಎಂದರೆ ಸರಿಯಲ್ಲ. ಈ ಸಂಬಂಧ ನನಗೆ ಹಾಗೂ ಚಾಸ-1 ರವರಿಗೆ 1 ನೇ ಆರೋಪಿ ಕರೆ ಮಾಡಿ ಹಣ ಕೊಡುವಂತೆ ಹಾಗೂ ಜಾಮೀನು ಕೊಡಿಸುವಂತೆ ಬೇಡಿಕೆ ಇಟ್ಟಿದ್ದು, ಇಲ್ಲವಾದರೆ ಮನೆ ಹಾಗೂ ಕಲ್ಯಾಣ ಮಂಟಪ ಸುಟ್ಟು ಹಾಕುತ್ತೇನೆಂದು ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ.

**4.** ಈ ಎಲ್ಲಾ ವಿಷಯ ಕುರಿತು ಪೋಲಿಸರ ಮುಂದೆ ನಿಪಿ-3 ರಂತೆ ಈಗ ಓದಿ ಹೇಳಿದ್ದಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

**5.** ಘಟನೆ ಬಗ್ಗೆ ಎಲ್ಲಾ ವಿಷಯ ತಿಳಿದಿದ್ದರೂ ಕೂಡ ಈಗ ಆರೋಪಿತರೊಂದಿಗೆ ರಾಜೀ ಆಗಿರುವುದರಿಂದ ಸದರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ